**ಪತ್ರ ಸಂ:** **ದಿ:10-12-2009**

**ಗೆ,**

ಜಿಲ್ಲಾಧಿಕಾರಿಗಳು

---------------- ಜಿಲ್ಲೆ

ಮಾನ್ಯರೆ,

**ವಿಷಯ**: ಪಟ್ಟಣ/ನಗರ ಪ್ರದೇಶಗಳಲ್ಲಿನ ಬಡಜನರಿಗೆ ವಸತಿ ಕಲ್ಪಿಸುವ "ನಮ್ಮ ಮನೆ" ಯೋಜನೆ ಅನುಷ್ಠಾನದ ಬಗ್ಗೆ

ಉಲ್ಲೇಖ: 1) ಸರ್ಕಾರದ ಆದೇಶ ಸಂ. ವ ಇ 37 ಹೆಚ್‌ಎಹೆಚ್ 2009, ಬೆಂಗಳೂರು, 17-11-2009

2) ಸರ್ಕಾರದ ಸುತ್ತೋಲೆ ಸಂ. ವಇ 37 ಹೆಚ್‌ಎಹೆಚ್ 2009, ಬೆಂಗಳೂರು, 17-11-2009

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಇಲಾಖೆಯು ನಗರ ಪ್ರದೇಶದಲ್ಲಿನ ಬಡಜನರಿಗೆ ಬೇರೆಯವರಿಂದ ನಿರ್ಮಿಸಲ್ಪಟ್ಟ ಮನೆಯನ್ನು ಖರೀದಿಸಲು ಅಥವಾ ಅವರ ಸ್ವಂತ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳಲು ಪಡೆದ 1.00 ಲಕ್ಷ ರೂಗಳವರೆಗಿನ ಸಾಲದ ಮೇಲಿನ ಬಡ್ಡಿಗೆ ಶೇ 5% ರಷ್ಟು ಸಹಾಯಧನವನ್ನು ನೀಡಲು "ನಗರದ ಬಡಜನರ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆ" ಯನ್ನು ಜಾರಿಗೆ ತಂದಿದೆ. ಜಿಲ್ಲಾಧಿಕಾರಿಗಳು ಹಾಗು ಪೌರಾಡಳಿತ ನಿರ್ದೇಶಕರ ಮುಖಾಂತರ ನಗರ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಈ ಯೋಜನೆಯನ್ನು ರಾಜ್ಯದಲ್ಲಿ "ನಮ್ಮ ಮನೆ" ಎಂಬ ಹೆಸರಿನಲ್ಲಿ ಜಾರಿಗೆ ತರಲು ಉದ್ದೇಶಿಸಲಾಗಿದೆ. ಯೋಜನೆಯ ಬಗೆಗಿನ ಪೂರ್ಣ ಮಾಹಿತಿ ಹಾಗು ಅನುಷ್ಠಾನದ ಮಾರ್ಗಸೂಚಿಗಳನ್ನು ಉಲ್ಲೇಖಿತ ದಿ: 17-11-2009 ರ ಸರ್ಕಾರದ ಆದೇಶ ಹಾಗು ಸುತ್ತೋಲೆಯಲ್ಲಿ ನೀಡಲಾಗಿದ್ದು ಮಾಹಿತಿಗಾಗಿ ಅವುಗಳನ್ನು ಲಗತ್ತಿಸಲಾಗಿದೆ.

ಫಲಾನುಭವಿಗಳ ಆಯ್ಕೆಗಾಗಿ ಜಿಲ್ಲಾ ಸಮನ್ವಯ ಸಮಿತಿಯನ್ನು ರಚಿಸಲಾಗಿದ್ದು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ.

| | |
|---|---|
| ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| ಉಪವಿಭಾಗಾಧಿಕಾರಿಗಳು | ಸದಸ್ಯರು |
| ತಹಶೀಲ್ದಾರರು | ಸದಸ್ಯರು |
| ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| ಪೌರಾಯುಕ್ತರು / ಮುಖ್ಯಾಧಿಕಾರಿಗಳು | ಸಮಾವೇಶಕ ಸದಸ್ಯರು |

ಈ ಯೋಜನೆಯ ಸೌಲಭ್ಯ ಪಡೆಯಲು ಇಚ್ಛಿಸುವ ಅರ್ಜಿದಾರರಿಗೆ ನೀಡುವ ಅರ್ಜಿ ಫಾರಂ ನಮೂನೆಯನ್ನು ಅನುಬಂಧ –1 ರಲ್ಲಿ ನೀಡಲಾಗಿದೆ ಹಾಗು ಜಿಲ್ಲಾವಾರು ಸಾಧಿಸಬೇಕಾದ ಕನಿಷ್ಠ ಗುರಿಯನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಕೋರಿದೆ

1) ಜಿಲ್ಲಾವಾರು ಗುರಿಯನ್ನಾಧರಿಸಿ ಅರ್ಜಿಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿಯಿಂದ ಮುದ್ರಿಸಿ ಸ್ಥಳೀಯ ಸಂಸ್ಥೆಗಳಿಗೆ ನೀಡುವುದು. ಮುದ್ರಣ ವೆಚ್ಚವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿಯ ಸಾಮಾನ್ಯ ವೆಚ್ಚಗಳಡಿ ಭರಿಸತಕ್ಕದ್ದು.

2) ಪೌರಾಯುಕ್ತರು ಹಾಗು ಮುಖ್ಯಾಧಿಕಾರಿಗಳು ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಧ್ವನಿವರ್ಧಕದ ಮೂಲಕ ಈ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ನೀಡತಕ್ಕದ್ದು ಹಾಗು ಈ ಪ್ರಚಾರ ಕಾರ್ಯಕ್ಕೆ ತಗಲುವ ವೆಚ್ಚವನ್ನು ಸ್ಥಳೀಯ ಸಂಸ್ಥೆ ನಿಧಿಯಿಂದ ಭರಿಸತಕ್ಕದ್ದು

3) ಈ ಯೋಜನೆಯ ಸೌಲಭ್ಯ ಪಡೆಯಲು ಸಾರ್ವಜನಿಕರಿಂದ ದಿನಾಂಕ 30–12–2009 ರೊಳಗಾಗಿ ಜಿಲ್ಲಾ ಪತ್ರಿಕೆಗಳ ಮೂಲಕ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಆಹ್ವಾನಿಸುವುದು. ಅದರಲ್ಲಿ ಅರ್ಜಿ ದೊರೆಯುವ ಸ್ಥಳ, ಸಮಯ ಹಾಗು ಅರ್ಜಿ ವಿತರಿಸುವ ಕೊನೆಯ ದಿನಾಂಕವನ್ನು ನಮೂದಿಸುವುದು ಹಾಗು ಅರ್ಜಿ ಆಹ್ವಾನಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.

4) ಅರ್ಜಿ ಆಹ್ವಾನಿಸಿದ ದಿನಾಂಕದಿಂದ 2 ತಿಂಗಳು ನಂತರ ಅರ್ಜಿ ವಿತರಿಸುವ ಕೊನೆಯ ದಿನಾಂಕವನ್ನು ನಿಗದಿ ಪಡಿಸುವುದು

5) ಅರ್ಜಿದಾರರಿಂದ ಬಂದ ಅರ್ಜಿಗಳನ್ನು ನಗರ ಸ್ಥಳೀಯ ಸಂಸ್ಥೆಗಳು ಪಡೆದು, 15 ದಿನಗಳೊಳಗಾಗಿ ಪರಿಶೀಲಿಸಿ ಕ್ರೋಢೀಕರಿಸಿ ಅರ್ಜಿ ಹಾಗು ಎಲ್ಲಾ ನಿಗದಿತ ಲಗತ್ತುಗಳೊಡನೆ ಜಿಲ್ಲಾ ಆಯ್ಕೆ ಸಮನ್ವಯ ಸಮಿತಿಗೆ ಸಲ್ಲಿಸತಕ್ಕದ್ದು.

6) ಜಿಲ್ಲಾ ಆಯ್ಕೆ ಸಮನ್ವಯ ಸಮಿತಿಯು ಸಾಧ್ಯವಾದಷ್ಟು ಕಡಿಮೆ ಸಮಯದಲ್ಲಿ ಆರ್ಜಿಗಳನ್ನು ಪರಿಶೀಲಿಸಿ ಅರ್ಹ ಪಲಾನುಭವಿಗಳ ಅಂತಿಮ ಪಟ್ಟಿಯನ್ನು ನಿಗದಿಪಡಿಸಿ ಸ್ಥಳೀಯ ಸಂಸ್ಥೆಗಳಿಗೆ ನೀಡುವುದು.

7) ಜಿಲ್ಲಾ ಆಯ್ಕೆ ಸಮನ್ವಯ ಸಮಿತಿಯಿಂದ ಅನುಮೋದನೆಗೊಂಡ ಪಟ್ಟಿಯನ್ನು ನಗರ ಸ್ಥಳೀಯ ಸಂಸ್ಥೆಗಳು ನಿಗದಿತ ಬ್ಯಾಂಕ್ ಗಳಿಗೆ ಕೂಡಲೇ ರವಾನಿಸತಕ್ಕದ್ದು.

8) ಈ ಯೋಜನೆಯಡಿ ಸಾಲ ಪಡೆದ ಫಲಾನುಭವಿಗಳ ವಿವರವನ್ನು ಅನುಬಂಧ– 3 ರಲ್ಲಿ ನೀಡಿರುವ ನಮೂನೆಯಂತೆ ಮಾಹಿತಿಯನ್ನು ನಗರ ಸ್ಥಳೀಯ ಸಂಸ್ಥೆಗಳು ಜಿಲ್ಲಾ ನಗರಾಭಿವೃದ್ಧಿ ಕೋಶದ ಮೂಲಕ ಪ್ರತಿ ತಿಂಗಳು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

9) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಯೋಜನೆಯ ಪ್ರಗತಿ ಪರಿಶೀಲಿಸಲು ಬ್ಯಾಂಕ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಬೇಕು. ಈ ಸಮಿತಿಯು ಯೋಜನೆಯ ಫಲಾನುಭವಿಯು ಸಾಲದ ಮೊತ್ತವನ್ನು ಮನೆ ಕಟ್ಟಲು ಉಪಯೋಗಿಸುತ್ತಿದ್ದಾನೆಂಬುದನ್ನು ಹಾಗು ಸಕಾಲದಲ್ಲಿ ಮನೆ ನಿರ್ಮಾಣವನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಅಲ್ಲದೇ ಸಾಲದ ಮರುಪಾವತಿ ಷರತ್ತಿಗನುಗುಣವಾಗಿ ಫಲಾನುಭವಿಯು ಪ್ರತಿ ತಿಂಗಳು ಸಾಲದ ಕಂತನ್ನು ಮರುಪಾತಿಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

10) ಈ ಯೋಜನೆಯಲ್ಲಿ ಸಾಲ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಫಲಾನುಭವಿಗಳು 22.75% ಯೋಜನೆಯ ಸೌಲಭ್ಯ ಕೂಡ ಪಡೆಯಬಹುದಾಗಿದೆ.

11) ಈ ಯೋಜನೆಯ ಮಾಹಿತಿಯು ಪೌರಾಡಳಿತ ನಿರ್ದೇಶನಾಲಯದ ವೆಬ್ ಸೈಟ್ www.municipaladmin.gov.in ನಲ್ಲಿಯೂ ಕೂಡ ಲಭ್ಯವಿರುತ್ತದೆ.

12) ಹೆಚ್ಚಿನ ಮಾಹಿತಿಗಾಗಿ ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕರು (ಹಣಕಾಸು) ಅಥವಾ ಸಂಶೋಧನಾ ಧಿಕಾರಿ ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/-

ಆಯುಕ್ತರು

ಪೌರಾಡಳಿತ ನಿರ್ದೇಶನಾಲಯ

ಲಗತ್ತು:

1) ಸರ್ಕಾರದ ಆದೇಶ ಸಂ. ವ ಇ 37 ಹೆಚ್‌ಎಹೆಚ್ 2009, ಬೆಂಗಳೂರು, 17-11-2009
2) ಸರ್ಕಾರದ ಸುತ್ತೋಲೆ ಸಂ. ವಇ 37 ಹೆಚ್‌ಎಹೆಚ್ 2009, ಬೆಂಗಳೂರು, 17-11-2009

**ಅನುಬಂಧ - 1**

| ಅರ್ಜಿದಾರನ/ಳ ಭಾವಚಿತ್ರ |
|---|
| |

| | |
|---|---|
| **ಅರ್ಜಿದಾರನ/ಳ ಹೆಸರು** | |
| **ತಂದೆ/ಗಂಡನ ಹೆಸರು** | |
| **ವಿಳಾಸ** | |
| **ಪಟ್ಟಣ/ನಗರದ ಖಾಯಂ ನಿವಾಸಿಯಾಗಿದ್ದಲ್ಲಿ ಮತದಾರರ ಭಾವಚಿತ್ರ ಸಂಖ್ಯೆ/ರೇಶನ್ ಕಾರ್ಡ ಸಂಖ್ಯೆ ನೀಡುವುದು** | |

| | |
|---|---|
| **ಮಾಸಿಕ/ವಾರ್ಷಿಕ ವರಮಾನ** | |
| **ನಿವೇಶನ ಹೊಂದಿದ್ದಲ್ಲಿ ನಿವೇಶನ ಸಂಖ್ಯೆ ಹಾಗು ವಿಳಾಸ** | |
| **ನಿವೇಶನದ ವಿಸ್ತೀರ್ಣ** | |
| **ನೇರವಾಗಿ ಮನೆ ಖರೀದಿಸಲು ಇಚ್ಛಿಸಿದ್ದಲ್ಲಿ ಮನೆ ಸಂಖ್ಯೆ ಹಾಗು ವಿಳಾಸ** | |

**ಅರ್ಜಿದಾರರ ಘೋಷಣೆ**

ಶ್ರೀ/ಶ್ರೀಮತಿ ------------------------ ಆದ ನಾನು ------------------- ಪಟ್ಟಣ/ನಗರದ ಖಾಯಂ ನಿವಾಸಿಯಾಗಿದ್ದು ನನ್ನ ಹೆಸರಿನಲ್ಲಾಗಲಿ ಅಥವಾ ನನ್ನ ಪತಿ/ಪತ್ನಿ ಅಥವಾ ಅವಲಂಬಿತ ಮಗ/ಮಗಳ ಹೆಸರಿನಲ್ಲಿ ಯಾವುದೇ ಪಕ್ಕಾ ಮನೆಯನ್ನು ಹೊಂದಿರುವುದಿಲ್ಲ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ಅರ್ಜಿದಾರರ ಹೆಸರು ಅರ್ಜಿದಾರರ ಸಹಿ

**ಅರ್ಜಿಯೊಡನೆ ಲಗತ್ತಿಸಬೇಕಾದ ದಾಖಲೆಗಳು**

1 ಆದಾಯ ಪ್ರಮಾಣ ಪತ್ರ (ಹಿಂದಿನ ಒಂದು ವರ್ಷಕ್ಕೆ ಸಮಭಂದಿಸಿದಂತೆ)

2 ಸ್ಥಳೀಯ ಸಂಸ್ಥೆಯಿಂದ ಆಸ್ಥಿ ತೆರಿಗೆ ನಿರ್ಧರಣಾ ಪ್ರಮಾಣ ಪತ್ರ

3 ಮತದಾರರ ಭಾವಚಿತ್ರ / ರೇಶನ್ ಕಾರ್ಡ ಪ್ರತಿ
(ಮೇಲ್ಕಂಡ ದಾಖಲೆಗಳ ಧೃಡೀಕೃತ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು)